ಸ್ಥಾಪನೆ : 1938 ದೂರವಾಣಿ : 080-22860125
29580125

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ನೋಂದಣಿ ಸಂಖ್ಯೆ : 437-ಎ.ಆರ್.ದಿನಾಂಕ : 14.10.1938

ಮೊದಲನೇ ಮಹಡಿ, ಹಳೇ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು-560 001.

**e-mail Id : jdmpcsl@gmail.com Website : www.jdmcs.in**

## 2020-2021ನೇ ಸಾಲಿನ 71ನೇ ಸರ್ವಸದಸ್ಯರ ವರ್ಚುಯಲ್ ಮಹಾಸಭೆಯ ಸೂಚನಾ ಪತ್ರ

ಮೇಲ್ಕಂಡ ಸಂಘದ 2020-2021ನೇ ಸಾಲಿನ 71ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಕೋವಿಡ್ 19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ (ಸಇ 60 ಸಿಎಲ್‌ಎಮ್ 2021(ಇ) ಬೆಂಗಳೂರು, ದಿನಾಂಕ 04/08/2021) ವರ್ಚುಯಲ್ ಸಭೆಯ ಮುಖಾಂತರ **ದಿನಾಂಕ 19.12.2021ನೇ ಭಾನುವಾರದಂದು ಬೆಳಿಗ್ಗೆ 10:45 ಘಂಟೆಗೆ** ಸರಿಯಾಗಿ ಸಂಘದ ಅಧ್ಯಕ್ಷರಾದ **ಶ್ರೀ ಡಿ.ಎಸ್ ಹಿರೇಮಠ್‌ರವರ ಅಧ್ಯಕ್ಷತೆಯಲ್ಲಿ** ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರು http://live.ravgonet.in ಈ ಲಿಂಕ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುವುದರ ಮೂಲಕ ವರ್ಚುಯಲ್ ಮಹಾಸಭೆಯಲ್ಲಿ ಪಾಲ್ಗೊಂಡು 71ನೇ ಸರ್ವಸದಸ್ಯರ ಮಹಾಸಭೆಯನ್ನು ಯಶಸ್ವಿಗೊಳಿಸಬೇಕೆಂದು ಅತ್ಯಂತ ಕಳಕಳಿಯಿಂದ ವಿನಂತಿಸಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

**ದಿನಾಂಕ : 27/11/2021** ಸಹಿ/-

ಸ್ಥಳ : ಬೆಂಗಳೂರು **(ಕಾಂತರಾಜ್ ಎಸ್. ಎನ್.)**

ವ್ಯವಸ್ಥಾಪಕರು / ವೇತನಕಾರ್ಯದರ್ಶಿ

## 2020-21ನೇ ಸಾಲಿನ 71ನೇ ಸರ್ವಸದಸ್ಯರ ವರ್ಚುಯಲ್ ಮಹಾಸಭೆಯ ಕಾರ್ಯಕ್ರಮಗಳು

1. ಪ್ರಾರ್ಥನೆ
2. ಸ್ವಾಗತ ಭಾಷಣ
3. 2020-2021ನೇ ಸಾಲಿನ ಸರ್ವಸದಸ್ಯರುಗಳ ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
4. ದೈವಾಧೀನರಾದ ಸಂಘದ ಸದಸ್ಯರುಗಳಿಗೆ ಗೌರವಾರ್ಥವಾಗಿ ಸಂತಾಪ ಸೂಚನೆ.
5. ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದನೆ ಪಡೆದುಕೊಳ್ಳುವುದು.
6. 2020-2021ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳ ಹೆಸರುಗಳನ್ನು ಓದಿ ತಿಳಿಸುವುದು.
7. ಹಿಂದಿನ ಮಹಾಸಭೆಯ ಕಾರ್ಯಕಲಾಪಗಳನ್ನು ಓದಿ ದಾಖಲು ಮಾಡುವುದು.
8. 2020-2021ನೇ ಸಾಲಿನ ನಿವ್ವಳ ಲಾಭ ವಿತರಿಸಲು ಅನುಮೋದನೆ ಪಡೆದುಕೊಳ್ಳುವುದು.
9. 2021-2022ನೇ ಸಾಲಿನ ಅಂದಾಜು ವೆಚ್ಚದ ಅನುಮೋದನೆ.
10. 2020-2021ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಅಂಗೀಕರಿಸುವುದು.
11. 2021-2022ನೇ ಅವಧಿಗಾಗಿ ಸನ್ನದು ಲೆಕ್ಕಪರಿಶೋಧಕರನ್ನು ನೇಮಿಸಲು ಅನುಮೋದನೆ ಪಡೆದುಕೊಳ್ಳುವುದು.
12. ಬೈಲಾ ತಿದ್ದುಪಡಿ ಸಂಖ್ಯೆ 38ಬಿ(ii), 60, 17(h), 63 ಗಳಿಗೆ ತಿದ್ದುಪಡಿಗಳನ್ನು ಹಾಗೂ ಕಾರಣಗಳನ್ನು ಲಗತ್ತಿಸಿದೆ.
13. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.
14. ವಂದನಾರ್ಪಣೆ.
15. ರಾಷ್ಟ್ರಗೀತೆ.

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ಮೊದಲನೇ ಮಹಡಿ, ಹಳೇ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು-560 001.

## ಆಡಳಿತ ಮಂಡಳಿಯ ಸದಸ್ಯರುಗಳು

| ಕ್ರಮ ಸಂಖ್ಯೆ | ನಿರ್ದೇಶಕರ ಹೆಸರು | ಹುದ್ದೆ |
|---|---|---|
| 1. | ಶ್ರೀ ಹಿರೇಮಠ್. ಡಿ.ಎಸ್ | ಅಧ್ಯಕ್ಷರು |
| 2. | ಶ್ರೀ ಚಂದ್ರಶೇಖರ್. ಜಿ | ಉಪಾಧ್ಯಕ್ಷರು |
| 3. | ಶ್ರೀ ಚಂದ್ರಪ್ರಭ.ಕೆ.ಜೆ | ಖಜಾಂಚಿ |
| 4. | ಶ್ರೀ ವೆಂಕಟಾಚಲಪತಿ ನಾಯಕ್.ಎಸ್ | ಆಂತರಿಕ ಲೆಕ್ಕಪರಿಶೋಧಕರು |
| 5. | ಶ್ರೀ ಅಣ್ಣೇಗೌಡ. ಕೆ.ಸಿ | ನಿರ್ದೇಶಕರು |
| 6. | ಶ್ರೀ ಮೋಹನ್ ಕುಮಾರ್.ಎಂ.ಎನ್ | ನಿರ್ದೇಶಕರು |
| 7. | ಶ್ರೀ ಭೀಮಣ್ಣ ಹೆಚ್.ಎಸ್ | ನಿರ್ದೇಶಕರು |
| 8. | ಶ್ರೀ ಕೃಷ್ಣಪ್ಪ. ಎಂ.ಸಿ. | ನಿರ್ದೇಶಕರು |
| 9. | ಶ್ರೀ ಪ್ರಕಾಶ್ ಟಿ | ನಿರ್ದೇಶಕರು |
| 10. | ಶ್ರೀ ಪ್ರಸನ್ನ ಎಂ.ಕೆ | ನಿರ್ದೇಶಕರು |
| 11. | ಶ್ರೀ ಪ್ರಕಾಶ್. ಹೆಚ್ | ನಿರ್ದೇಶಕರು |
| 12. | ಶ್ರೀಮತಿ ತನುಜಾರಾಣಿ.ಪಿ.ಆರ್. | ನಿರ್ದೇಶಕರು |
| 13. | ಶ್ರೀಮತಿ ಪ್ರೇಮಕುಮಾರಿ. ಎಂ | ನಿರ್ದೇಶಕರು |
| 14. | ಶ್ರೀ ಪರಶುರಾಮ ಕೆ ದೊಡಮನಿ | ನಿರ್ದೇಶಕರು |
| 15. | ಶ್ರೀ ಮುರಳೀಧರ. ಕೆ | ನಿರ್ದೇಶಕರು |
| 16. | ಶ್ರೀ ರಾಘವೇಂದ್ರ ಬಿ.ಎಸ್ | ನಿರ್ದೇಶಕರು |
| 17. | ಶ್ರೀಮತಿ ಸರೋಜ ಸಿ.ಎಂ | ನಿರ್ದೇಶಕರು |

## -: ಸೂಚನೆಗಳು :-

1 ಮಾನ್ಯ ಸದಸ್ಯರು ವರ್ಚುಯಲ್ ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಇದ್ದಲ್ಲಿ ವರ್ಚುಯಲ್ ಮಹಾಸಭೆ ನಡೆಯುವ 05 ದಿನಗಳ ಮುಂಚಿತವಾಗಿ ಸಂಘಕ್ಕೆ ಲಿಖಿತ ರೂಪದಲ್ಲಿ ತಲುಪಿಸತಕ್ಕದ್ದು. ಅಂತಹ ಸದಸ್ಯರುಗಳಿಗೆ ಪ್ರತ್ಯೇಕವಾಗಿ ಲಿಂಕ್ ಅನ್ನು ಎಸ್.ಎಂ.ಎಸ್ ಮೂಲಕ ಕಳುಹಿಸಲಾಗುವುದು. ಆದ್ಯತೆ ಮೇರೆಗೆ ಸದಸ್ಯರಿಗೆ ಸಭೆಯಲ್ಲಿ ಮಾತನಾಡಲು ಅವಕಾಶ ನೀಡಲಾಗುವುದು.

2. ಸಂಘದ ಸದಸ್ಯರ ಮನೆಯ ವಿಳಾಸ, ಮೊಬೈಲ್ (ದೂರವಾಣಿ ಸಂಖ್ಯೆ)ಬದಲಾದಲ್ಲಿ ಅಥವಾ ಬೇರೆ ನ್ಯಾಯಾಲಯಗಳಿಗೆ ವರ್ಗಾವಣೆಗೊಂಡಲ್ಲಿ ಮಾಹಿತಿಯನ್ನು ಖುದ್ದಾಗಿ, ಲಿಖಿತ ರೂಪದಲ್ಲಿ ಅಥವಾ ದೂರವಾಣಿ ಮೂಲಕವಾಗಿ ಸಂಘದ ಕಛೇರಿಗೆ ತಿಳಿಸತಕ್ಕದ್ದು.

3. ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣದಿಂದ ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ 2020–21 ನೇ ಸಾಲಿನ ಷೇರು ಲಾಭಾಂಶ (ಡಿವಿಡೆಂಡ್) ಹಣವನ್ನು ಮಹಾಸಭೆಯ ಒಪ್ಪಿಗೆ ಪಡೆದು ಸದಸ್ಯರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾಗೊಳಿಸಲಾಗುವುದು. ಆದ್ದರಿಂದ ಸಂಘದ ಸದಸ್ಯರು ಕಡ್ಡಾಯವಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಕೋಟಕ್ ಮಹೀಂದ್ರ ಬ್ಯಾಂಕ್‌ನ ಉಳಿತಾಯ ಖಾತೆಯ ಸಂಖ್ಯೆಯನ್ನು ಸಂಘಕ್ಕೆ ಒದಗಿಸತಕ್ಕದ್ದು. ಬ್ಯಾಂಕ್ ಖಾತೆಗಳ ವಿವರಗಳನ್ನು ಒದಗಿಸದಿದ್ದಲ್ಲಿ ನಮ್ಮ ಸಂಘದ ಕಛೇರಿಯ ದಾಖಲೆಗಳಲ್ಲಿ ಲಭ್ಯವಿರುವ ಸದಸ್ಯರ ಬ್ಯಾಂಕ್ ಖಾತೆಗಳಿಗೆ ಡಿವಿಡೆಂಡ್ ಹಣವನ್ನು ಜಮೆ ಮಾಡಲು ಕ್ರಮಕೈಗೊಳ್ಳಲಾಗುವುದು. ಸಂಘದ ಕಛೇರಿಯಲ್ಲಿ ಲಭ್ಯವಿರುವ ಸದಸ್ಯರ ಬ್ಯಾಂಕ್ ಖಾತೆಗಳ ವಿವರಗಳಲ್ಲಿ ವ್ಯತ್ಯಾಸವಿದ್ದಲ್ಲಿ ಜಮೆ ಮಾಡಲಾದ ಡಿವಿಡೆಂಡ್ ಹಣವು ವಾಪಸ್ ಬರಬಹುದು ಅಥವಾ ಬೇರೆ ವ್ಯಕ್ತಿಗಳ ಖಾತೆಗಳಿಗೆ ಜಮೆಯೂ ಆಗಬಹುದು. ಅಂತಹ ಸಂದರ್ಭದಲ್ಲಿ ಆಡಳಿತ ಮಂಡಳಿಯು ಯಾವುದೇ ರೀತಿಯ ಜವಾಬ್ದಾರಿವಹಿಸುವುದಿಲ್ಲ.

ಈ ಕೆಳಗೆ ಸೂಚಿಸಿರುವ ನಮೂನೆಯ ಪ್ರಕಾರ ಸದಸ್ಯರ ವಿವರಗಳನ್ನು ಖಡ್ಡಾಯವಾಗಿ ಸಂಘದ ಕಛೇರಿಗೆ ತಲುಪಿಸತಕ್ಕದ್ದು.

| ಕ್ರಮ ಸಂಖ್ಯೆ | ಕೆಜಿಐಡಿ ಸಂಖ್ಯೆ | ಸಂಘದ ಖಾತೆ ಸಂಖ್ಯೆ | ಮೊಬೈಲ್ ಸಂಖ್ಯೆ | ಸದಸ್ಯರ ಹೆಸರು | ಎಸ್ ಬಿ ಐ (SBI) ಅಥವಾ ಕೋಟಕ್ ಮಹೀಂದ್ರ ಬ್ಯಾಂಕ್ (KOTAK MAHINDRA BANK) ಖಾತೆ ಸಂಖ್ಯೆ | ಇ–ಮೇಲ್ |
|---|---|---|---|---|---|---|
| | | | | | | |

4. ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸಂಘದ ಸದಸ್ಯರುಗಳ ಮಕ್ಕಳ ಹೆಸರು, ಭಾವಚಿತ್ರ ಮತ್ತು ವಿವರಗಳನ್ನು ಪ್ರತಿಭಾ ಪುರಸ್ಕಾರ ಪಟ್ಟಿಗೆ ಸೇರಿಸಲು ಆಯಾ ಶೈಕ್ಷಣಿಕ ವರ್ಷದೊಳಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಪ್ರತಿ ವರ್ಷ ನಿಗದಿಪಡಿಸಲಾಗುವ ಶೇಕಡವಾರು ಅಂಕಗಳನ್ನು ಸುತ್ತೋಲೆಯ ಮೂಲಕ ತಿಳಿಸಲಾಗುವುದು. ಸುತ್ತೋಲೆ ತಲುಪದಿದ್ದ ಪಕ್ಷದಲ್ಲಿ ಸದಸ್ಯರು ದೂರವಾಣಿ ಮೂಲಕ ಸಂಘದ ಕಛೇರಿಯನ್ನು ಸಂಪರ್ಕಿಸಿ ವಿವರಗಳನ್ನು ಪಡೆಯುವುದು.

5. ಮಾನ್ಯ ಸದಸ್ಯರು ಸಂಘಕ್ಕೆ ಸಲ್ಲಿಸುವ ಚೆಕ್/ಡಿಡಿಗಳನ್ನು ಕಡ್ಡಾಯವಾಗಿ "JDMCS Ltd." ಹೆಸರಿನಲ್ಲಿ ತೆಗೆದುಕೊಳ್ಳತಕ್ಕದ್ದೇ ಹೊರತು ಅಧ್ಯಕ್ಷರು, ಛೇರ್ಮನ್, ಸೆಕ್ರೆಟರಿ ಅಥವಾ ಇನ್ನಾವುದೇ ಹೆಸರಿನಲ್ಲಿ ತೆಗೆದುಕೊಳ್ಳತಕ್ಕದ್ದಲ್ಲ. ತಪ್ಪಿದ್ದಲ್ಲಿ ಚೆಕ್/ಡಿಡಿಗಳು ಅಮಾನ್ಯಗೊಳ್ಳುವ ಸಾಧ್ಯತೆಗಳಿರುತ್ತವೆ.

6. ಸಹಕಾರ ಸಂಘಗಳ ಕಾಯ್ದೆ 20(2) (a-iv), (a-v) & 27A ಪ್ರಕಾರ ಕಳೆದ 5 (ಐದು) ಮಹಾಸಭೆಗಳಲ್ಲಿ ಕನಿಷ್ಠ 2 (ಎರಡು) ಮಹಾಸಭೆಗಳಿಗೆ ಹಾಜರಾಗದ ಸದಸ್ಯರಿಗೆ ಹಾಗೂ ಕಳೆದ ಐದು ವರ್ಷಗಳ ಪೈಕಿ 2 (ಎರಡು) ವರ್ಷಗಳಲ್ಲಿ ಕನಿಷ್ಠ ಸೇವೆ ಬಳಸಿಕೊಳ್ಳದ ಸದಸ್ಯರಿಗೆ ಮುಂದಿನ ಚುನಾವಣೆಯಲ್ಲಿ ಮತ ಚಲಾಯಿಸಲು ಹಾಗೂ ನಿರ್ದೇಶಕರ ಸ್ಥಾನಗಳಿಗೆ ಸ್ಪರ್ಧಿಸಲು ಹಕ್ಕಿರುವುದಿಲ್ಲ.

7. ಲೆಕ್ಕಪರಿಶೋಧನಾ ವರದಿ ಹಾಗೂ ಆರ್ಥಿಕ ತಖ್ತೆಯನ್ನು ಮಾನ್ಯ ಸದಸ್ಯರು ಸಂಘದ ವೆಬ್ ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಪರಿಶೀಲಿಸಬಹುದಾಗಿದೆ. (ಸಂಘದ ವೆಬ್‌ಸೈಟ್ ವಿಳಾಸ– www.jdmcs.in).

8. ಸರ್ವಸದಸ್ಯರ ಮಹಾಸಭೆಯನ್ನು ವೀಕ್ಷಿಸಲು ಅಥವಾ ಸಭೆಯಲ್ಲಿ ಭಾಗವಹಿಸಲು ಮಾನ್ಯ ಸದಸ್ಯರು ಈ ಕೆಳಕಂಡ QR ಕೋಡನ್ನು ಸಹ ಬಳಸಬಹುದಾಗಿದೆ. QR Link : http://live.ravgonet.in

Link : http://live.ravgonet.in

9. ಮಾನ್ಯ ಸಂಘದ ಸದಸ್ಯರು ಮಾಸಿಕ ಕಂತಿನ ಹಣವನ್ನು HRMS ಮೂಲಕ ತಮ್ಮ ತಮ್ಮ ಕಛೇರಿಯಿಂದಲೇ ಕಡ್ಡಾಯವಾಗಿ ಕಡಿತ ಮಾಡಿ ಕಳಿಸುವುದು ತಪ್ಪಿದಲ್ಲಿ ಅಂತಹ ಸದಸ್ಯರುಗಳು ಸಾಲ (LOAN) ಪಡೆಯಲು ಅರ್ಹರಾಗಿರುವುದಿಲ್ಲ.

10. ಮಾನ್ಯ ಸಂಘದ ಸದಸ್ಯರುಗಳಿಗೆ ಸಂಘದಲ್ಲಿ ಏನೇ ವಹಿವಾಟು ಆಗಿದ್ದಲ್ಲಿ ತಮ್ಮ ಮೊಬೈಲ್‌ಗೆ ಎಸ್.ಎಂ.ಎಸ್ ಮೂಲಕ ತಿಳಿಸುವ ವ್ಯವಸ್ಥೆ ಮಾಡಲಾಗಿದೆ.

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ಮೊದಲನೇ ಮಹಡಿ, ಹಳೇ ಕೆ.ಜಿ.ಐ.ಡಿ ಕಟ್ಟಡ, ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು-560 001.

**ದಿನಾಂಕ 19-12-2021ರಂದು ನಡೆಯಲಿರುವ ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ 71ನೇ ಸರ್ವ ಸದಸ್ಯರ ಮಹಾಸಭೆಯಲ್ಲಿ ಬೈಲಾ ತಿದ್ದುಪಡಿ ಅನುಮೋದನೆಗಾಗಿ ಮಂಡಿಸಿದ ಪ್ರಸ್ತಾವನೆಗಳು**

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಬೈಲಾ | ಬೈಲಾ ಸಂಖ್ಯೆ | ಪ್ರಸ್ತಾಪಿಸಿದ ತಿದ್ದುಪಡಿಗಳು (ನಂತರ ಈ ರೀತಿ ಓದಿಕೊಳ್ಳುವುದು) | ತಿದ್ದುಪಡಿಗೆ ಕಾರಣಗಳು |
|---|---|---|---|---|---|
| 1 | 38ಬಿ (ii) | <u>ಸದಸ್ಯರ ದೀರ್ಘಾವಧಿ ಸಾಲ :</u><br>ರೂ. 200,000-00 (ಎರಡು ಲಕ್ಷ ರೂಪಾಯಿಗಳು ಮಾತ್ರ) ವನ್ನು ದೀರ್ಘಾವಧಿ ಸಾಲವನ್ನಾಗಿ ಒಂದು ಬಾರಿಗೆ ಮಂಜೂರು ಮಾಡಬಹುದು ಮತ್ತು ಸದರಿ ಮೊತ್ತವನ್ನು ರೂ.4,000-00 ಗಳ ಮಾಸಿಕ ಕಂತಿನಂತೆ 50 ಸಮ ಕಂತುಗಳಲ್ಲಿ ಸಾಲ ಮಂಜೂರು ಮಾಡಿದ ತಿಂಗಳ ಕೊನೆಯ ದಿನಾಂಕದಿಂದ ವಸೂಲು ಮಾಡಲಾಗುವುದು. ಆದಾಗ್ಯೂ,<br>1) ಕಾಲಕಾಲಕ್ಕೆ ಆಡಳಿತ ಮಂಡಳಿಯು ನಿಗದಿಪಡಿಸುವ ಬಡ್ಡಿ ದರವು ಸದಸ್ಯರು ಪಡೆದಿರುವ ದೀರ್ಘಾವಧಿ ಸಾಲಕ್ಕೆ ಅನ್ವಯವಾಗುತ್ತದೆ.<br>2) 25 ತಿಂಗಳು ತೀರಿದ ತರುವಾಯ ಹಾಗೂ ಶೇಕಡಾ 50ರಷ್ಟು ದೀರ್ಘಾವಧಿ ಸಾಲ ತೀರಿದ ಬಳಿಕ ಸದಸ್ಯರುಗಳಿಗೆ ದೀರ್ಘಾವಧಿ ಸಾಲದ ಮೊತ್ತವನ್ನು ನವೀಕರಿಸಲಾಗುವುದು.<br>3) ದೀರ್ಘಾವಧಿ ಸಾಲ ಮಂಜೂರು ಮಾಡುವಾಗ ಸದಸ್ಯರ ಮನೆಗೊಯ್ಯುವ ಸಂಬಳವನ್ನು ಪರಿಶೀಲಿಸಿ ದೀರ್ಘಾವಧಿ ಸಾಲವನ್ನು ಮಂಜೂರು ಮಾಡಲು ಕಾರ್ಯಕಾರಿ ಮಂಡಳಿಗೆ ಅಧಿಕಾರವಿರುತ್ತದೆ. | 38ಬಿ (ii) | <u>ಸದಸ್ಯರ ದೀರ್ಘಾವಧಿ ಸಾಲ :</u><br>ರೂ. 2,50,000-00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ವನ್ನು ದೀರ್ಘಾವಧಿ ಸಾಲವನ್ನಾಗಿ ಒಂದು ಬಾರಿಗೆ ಮಂಜೂರು ಮಾಡಬಹುದು ಮತ್ತು ಸದರಿ ಮೊತ್ತವನ್ನು ರೂ.5,000-00 ಗಳ ಮಾಸಿಕ ಕಂತಿನಂತೆ 50 ಸಮ ಕಂತುಗಳಲ್ಲಿ ಸಾಲ ಮಂಜೂರು ಮಾಡಿದ ತಿಂಗಳ ಕೊನೆಯ ದಿನಾಂಕದಿಂದ ವಸೂಲು ಮಾಡಲಾಗುವುದು. ಆದಾಗ್ಯೂ,<br>1) ಕಾಲಕಾಲಕ್ಕೆ ಆಡಳಿತ ಮಂಡಳಿಯು ನಿಗದಿಪಡಿಸುವ ಬಡ್ಡಿಯ ದರವು ಸದಸ್ಯರು ಪಡೆದಿರುವ ದೀರ್ಘಾವಧಿ ಸಾಲಕ್ಕೆ ಅನ್ವಯವಾಗುತ್ತದೆ.<br>2) 25 ತಿಂಗಳು ತೀರಿದ ತರುವಾಯ ಹಾಗೂ ಶೇಕಡಾ 50ರಷ್ಟು ದೀರ್ಘಾವಧಿ ಸಾಲ ತೀರಿಸಿದ ಬಳಿಕ ಸದಸ್ಯರುಗಳಿಗೆ ದೀರ್ಘಾವಧಿ ಸಾಲದ ಮೊತ್ತವನ್ನು ನವೀಕರಿಸಲಾಗುವುದು.<br>3) ದೀರ್ಘಾವಧಿ ಸಾಲ ಮಂಜೂರು ಮಾಡುವಾಗ ಸದಸ್ಯರು ಮನೆಗೊಯ್ಯುವ ಸಂಬಳವನ್ನು ಪರಿಶೀಲಿಸಿ ದೀರ್ಘಾವಧಿ ಸಾಲವನ್ನು ಮಂಜೂರು ಮಾಡಲು ಕಾರ್ಯಕಾರಿ ಮಂಡಳಿಗೆ ಅಧಿಕಾರವಿರುತ್ತದೆ. | **ಸಂಘದ ಸದಸ್ಯರ ಹಿತದೃಷ್ಟಿಯಿಂದ** |
| 2 | 60 | <u>ಸಿಬ್ಬಂದಿ ದೀರ್ಘಾವಧಿ ಸಾಲ :</u><br>ಸಿಬ್ಬಂದಿ ವರ್ಗದವರ ದೀರ್ಘಾವಧಿ ಸಾಲ ರೂ.200,000-00 (ಎರಡು ಲಕ್ಷ ರೂಪಾಯಿಗಳು ಮಾತ್ರ) ವನ್ನು ದೀರ್ಘಾವಧಿ ಸಾಲವನ್ನಾಗಿ ಒಂದು ಬಾರಿಗೆ ಮಂಜೂರು ಮಾಡಬಹುದು ಮತ್ತು ಸದರಿ ಮೊತ್ತವನ್ನು ರೂ.4,000-00ಗಳ ಮಾಸಿಕ ಕಂತಿನಂತೆ 50 ಸಮ ಕಂತುಗಳಲ್ಲಿ ಸಾಲ ಮಂಜೂರು ಮಾಡಿದ ತಿಂಗಳ ಕೊನೆಯ ದಿನಾಂಕದಿಂದ ವಸೂಲು ಮಾಡತಕ್ಕದ್ದು ಆದಾಗ್ಯೂ, | 60 | <u>ಸಿಬ್ಬಂದಿ ದೀರ್ಘಾವಧಿ ಸಾಲ :</u><br>ಸಿಬ್ಬಂದಿ ವರ್ಗದವರ ದೀರ್ಘಾವಧಿ ಸಾಲ ರೂ.2,50,000-00 (ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ವನ್ನು ದೀರ್ಘಾವಧಿ ಸಾಲವನ್ನಾಗಿ ಒಂದು ಬಾರಿಗೆ ಮಂಜೂರು ಮಾಡಬಹುದು ಮತ್ತು ಸದರಿ ಮೊತ್ತವನ್ನು ರೂ.5,000-00ಗಳ ಮಾಸಿಕ ಕಂತಿನಂತೆ 50 ಸಮ ಕಂತುಗಳಲ್ಲಿ ಸಾಲ ಮಂಜೂರು ಮಾಡಿದ ತಿಂಗಳ ಕೊನೆಯ ದಿನಾಂಕದಿಂದ ವಸೂಲು ಮಾಡತಕ್ಕದ್ದು ಆದಾಗ್ಯೂ, | **ಸಂಘದ ಸಿಬ್ಬಂದಿಯವರ ಹಿತದೃಷ್ಟಿಯಿಂದ** |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಬೈಲಾ | ಬೈಲಾ ಸಂಖ್ಯೆ | ಪ್ರಸ್ತಾಪಿಸಿದ ತಿದ್ದುಪಡಿಗಳು (ನಂತರ ಈ ರೀತಿ ಓದಿಕೊಳ್ಳುವುದು) | ತಿದ್ದುಪಡಿಗೆ ಕಾರಣಗಳು |
|---|---|---|---|---|---|
| | | (1) ಕಾಲಕಾಲಕ್ಕೆ ಆಡಳಿತ ಮಂಡಳಿಯು ನಿಗದಿಪಡಿಸುವ ಬಡ್ಡಿದರವು ಸಿಬ್ಬಂದಿ ದೀರ್ಘಾವಧಿ ಸಾಲಕ್ಕೆ ಅನ್ವಯವಾಗುತ್ತದೆ.<br>(2) 25 ತಿಂಗಳು ತೀರಿದ ತರುವಾಯ ಹಾಗೂ ಶೇಕಡಾ 50ರಷ್ಟು ದೀರ್ಘಾವಧಿ ಸಾಲ ತೀರಿದ ಬಳಿಕ ಸಿಬ್ಬಂದಿಯ ದೀರ್ಘಾವಧಿ ಸಾಲವನ್ನು ನವೀಕರಿಸಲಾಗುವುದು.<br>(3) ದೀರ್ಘಾವಧಿ ಸಾಲ ಮಂಜೂರು ಮಾಡುವಾಗ ಸಿಬ್ಬಂದಿಯು ಮನೆಗೊಯ್ಯುವ ಸಂಬಳವನ್ನು ಪರಿಶೀಲಿಸಿ ಮಂಜೂರು ಮಾಡಲು ಕಾರ್ಯಕಾರಿ ಮಂಡಳಿಗೆ ಅಧಿಕಾರವಿರುತ್ತದೆ. | | (1) ಕಾಲಕಾಲಕ್ಕೆ ಆಡಳಿತ ಮಂಡಳಿಯು ನಿಗದಿಪಡಿಸುವ ಬಡ್ಡಿದರವು ಸಿಬ್ಬಂದಿಯವರು ಪಡೆದಿರುವ ದೀರ್ಘಾವಧಿ ಸಾಲಕ್ಕೆ ಅನ್ವಯವಾಗುತ್ತದೆ.<br>(2) 25 ತಿಂಗಳು ತೀರಿದ ತರುವಾಯ ಹಾಗೂ ಶೇಕಡಾ 50ರಷ್ಟು ದೀರ್ಘಾವಧಿ ಸಾಲ ತೀರಿದ ಬಳಿಕ ಸಿಬ್ಬಂದಿಯ ದೀರ್ಘಾವಧಿ ಸಾಲವನ್ನು ನವೀಕರಿಸಲಾಗುವುದು.<br>(3) ದೀರ್ಘಾವಧಿ ಸಾಲ ಮಂಜೂರು ಮಾಡುವಾಗ ಸಿಬ್ಬಂದಿಯು ಮನೆಗೊಯ್ಯುವ ಸಂಬಳವನ್ನು ಪರಿಶೀಲಿಸಿ ಮಂಜೂರು ಮಾಡಲು ಕಾರ್ಯಕಾರಿ ಮಂಡಳಿಗೆ ಅಧಿಕಾರವಿರುತ್ತದೆ. | |
| 3 | 17(h) | **If the subscriber ceases to be member of the society under byelaws number 6, he/she may be allowed by the committee of management to continue to be a subscriber of the bond till the date of its maturity. If he applies for cancellation of the bond the committee of management shall subject to byelaw number 6 (c) return to him all the amount subscribed by him till the date of his ceasing to be a member of the society. No interest shall be added by the society to the amount actually subscribed.** | 17(h) | ಸಂಘದ ಸದಸ್ಯರು ಭವಿಷ್ಯ ನಿಧಿ ಠೇವಣಿಯನ್ನು ಠೇವಣಿಕರಿಸಲು ಪ್ರಾರಂಭಿಸಿದ ದಿನಾಂಕದಿಂದ 12 ತಿಂಗಳ ನಂತರ ರದ್ದುಪಡಿಸಲು ಮನವಿ ಸಲ್ಲಿಸಿದಲ್ಲಿ ಅಂತಹವರಿಗೆ ಪಾವತಿಸಿರುವ ಭವಿಷ್ಯನಿಧಿ ಠೇವಣಿಗೆ ಶೇಕಡಾ 5 (5%) ರಷ್ಟು ಮಾತ್ರ ಬಡ್ಡಿ ಹಣವನ್ನು ನೀಡಲಾಗುವುದು. ಹಾಗೂ ಭವಿಷ್ಯ ನಿಧಿ ಠೇವಣಿಯನ್ನು ಠೇವಣಿಕರಿಸಲು ಪ್ರಾರಂಭಿಸಿದ ದಿನಾಂಕದಿಂದ 12 ತಿಂಗಳ ಒಳಗೆ ರದ್ದುಪಡಿಸಲು ಮನವಿ ಸಲ್ಲಿಸಿದಲ್ಲಿ ಅಂತಹವರಿಗೆ ಪಾವತಿಸಿರುವ ಭವಿಷ್ಯನಿಧಿ ಠೇವಣಿಗೆ ಬಡ್ಡಿಯನ್ನು ನೀಡತಕ್ಕದ್ದಲ್ಲ. | **ಸಂಘದ ಸದಸ್ಯರ ಹಿತದೃಷ್ಟಿ ಯಿಂದ** |
| 4 | 63 | **ಕಲಂ 27ಎ ಮತದಾನದ ಹಕ್ಕು :**<br>1. **ಹಿಂದಿನ 5 ವರ್ಷಗಳ ಮಹಾಸಭೆಯಲ್ಲಿ 3ರಲ್ಲಾದರೂ ಹಾಜರಿರತಕ್ಕದ್ದು.**<br>2. **ಕನಿಷ್ಟ ಸೇವೆಗಳು, ಸೌಲಭ್ಯಗಳ ಬಳಕೆ ಇಲ್ಲವಾದರೆ ಮೂರು ವರ್ಷ ಮತದಾನದ ಹಕ್ಕು ಇರತಕ್ಕದ್ದಲ್ಲ.** | 63 | **ಮತದಾನದ ಹಕ್ಕು:**<br>1. **ಹಿಂದಿನ 5 (ಐದು) ಮಹಾಸಭೆಗಳ ಪೈಕಿ 2(ಎರಡು) ಮಹಾಸಭೆಯಲ್ಲಿ ಹಾಜರಿರತಕ್ಕದ್ದು.**<br>2. **ಸಂಘದ ಸದಸ್ಯರು ಉಳಿತಾಯ ಠೇವಣಿ/ ಭವಿಷ್ಯನಿಧಿಗೆ ಠೇವಣಿಕರೀಸುವ ಸೇವೆಯನ್ನು ಕಳೆದ 5 (ಐದು) ವರ್ಷಗಳ ಪೈಕಿ 2 (ಎರಡು) ವರ್ಷಗಳಲ್ಲಿ ಬಳಸಿಕೊಳ್ಳತಕ್ಕದ್ದು.**<br>3. **ಮೇಲ್ಕಂಡ 63(1) ಮತ್ತು 63 (2)ನ್ನು ಸಂಘದ ಸದಸ್ಯರು ಪಾಲಿಸದೇ ಇದ್ದಲ್ಲಿ ಒಂದು ವರ್ಷಗಳ ಅವಧಿಗೆ ಮಹಾ ಸಭೆ ಅಥವಾ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.** | **ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕ್ಕೆ ತಿದ್ದುಪಡಿ ತಂದಿರು ವುದರಿಂದ** |

ತೆರೆದ–ಅಂಚೆ

ಖಾತೆ ಸಂಖ್ಯೆ :

ಗೆ,

ಶ್ರೀಮತಿ/ಶ್ರೀ ______________________________

______________________________________

______________________________________

ಅಂಚೆ ವಿಲೇವಾರಿಯಾಗದಿದ್ದಲ್ಲಿ ಈ ಕೆಳಗಿನ ವಿಳಾಸಕ್ಕೆ ಹಿಂತಿರುಗಿಸಿ :
**ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ**
ಮೊದಲನೇ ಮಹಡಿ, ಹಳೇ ಕೆ.ಜಿ.ಐ.ಡಿ ಕಟ್ಟಡ,
ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001.